


# ಕಡಲ ತಡಿಯ ಬೃಹತ್ ಆಹಾರ ಮೇಳ

ದಕ್ಷಿಣ ಲೆಬನಾನ್‌ನ ಬಟ್ರೌನ್ ಜಿಲ್ಲೆಯ ಕಡಲ ತೀರದಲ್ಲಿ ವೈವಿಧ್ಯಮಯ ಮೀನುಗಳ ಬೃಹತ್ ಪ್ರದರ್ಶನ ಏರ್ಪಡಿಸಲಾಗಿತ್ತು. 2613.8 ಕಿ.ಮೀ ಉದ್ದದ ಈ ಆಹಾರ ಮೇಳ 'ಲಾರ್ಜೆಸ್ಟ್ ಸೀಫುಡ್ ಡಿಶ್ಟ್' ಎಂಬ ಅಗ್ಗಳಿಕೆಯೊಂದಿಗೆ ಸೆಪ್ಟೆಂಬರ್ 4ರಂದು ಗಿನ್ನೆಸ್ ದಾಖಲೆ ಸೇರಿತು.

ಬಟ್ರೌನ್ ಪ್ರಪಂಚದ ಹಳೆಯ ನಗರಗಳಲ್ಲಿ ಒಂದಾಗಿದ್ದು, ಇಲ್ಲಿ ಮೀನುಗಾರಿಕೆ ಹಿಂದಿನಿಂದಲೂ ಪ್ರಾಮುಖ್ಯತೆ ಪಡೆದಿದೆ. ಪುಡಿ ಮೀನಿನಿಂದ ಹಿಡಿದು ದೈತ್ಯ ದೇಹಿ ಮೀನುಗಳು ಪ್ರದರ್ಶನ ಕಂಡವು. ವೈವಿಧ್ಯಮಯ ಆಕಾರ, ಬಣ್ಣಗಳ ಮೀನುಗಳನ್ನು ಕೊಳ್ಳಲು ಸಾವಿರಾರು ಜನರ ದಂಡೇ ಅಲ್ಲಿ ನೆರೆದಿತ್ತು. ಸಮುದ್ರ ಆಹಾರ ಪ್ರದರ್ಶನ ಗಿನ್ನೆಸ್ ದಾಖಲೆ ಸೇರುವ ಸಂದರ್ಭಕ್ಕೆ ಸಹಸ್ರಾರು ಜನ ಸಾಕ್ಷಿಯಾಗಿದ್ದರು. ಮತ್ಸ್ಯ ಪ್ರಿಯರಿಗಂತೂ ಅಂದು ಭರ್ಜರಿ ಹಬ್ಬವೇ ಸರಿ!

ಇದಕ್ಕೂ ಮೊದಲು 2011ರಲ್ಲಿ ನೆದರ್ಲೆಂಡ್ ಕಡಲ ತೀರದಲ್ಲಿ 2,271.7 ಕಿ.ಮೀ ಉದ್ದದ ಸಮುದ್ರ ಆಹಾರ ಪ್ರದರ್ಶಗೊಂಡು, ಗಿನ್ನೆಸ್ ದಾಖಲೆ ಸೇರಿತ್ತು.

■ ನಿಸರ್ಗ



